ಓ.ಎಸ್. ನಂಬರಃ 44/2023

ಡಿ. ಡಬ್ಲ್ಯೂಃ 1

(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು, ತಾಃ 12-02-2026)

ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್.ಬಿ.ಬಿ. ವಕೀಲರಿಂದ,

ವಾದಿ ನನ್ನ ಸಹೋದರಿ. 1 ಮತ್ತು 2ನೇ ಪ್ರತಿವಾದಿಗಳು ನನ್ನ ಹಿರಿಯ ಸಹೋದರಿಯರು ಎಂದರೆ ಸರಿ. ನಮ್ಮ ಕುಟುಂಬದ ಮೂಲ ಪುರುಷ ಬಾಬಯ್ಯ ಪುರುಸಯ್ಯ ನಾಯ್ಕ ಎಂದರೆ ಹೌದು. ದಾವೆಯಲ್ಲಿ ಕಾಣಿಸಿದ ದಾವಾ ಆಸ್ತಿಗಳೆಲ್ಲವೂ ಮೂಲ ಪುರುಷ ಬಾಬಯ್ಯ ಪುರುಸಯ್ಯ ನಾಯ್ಕ ರವರಿಂದಲೇ ಬಂದಿರುತ್ತದೆ ಎಂದರೆ ಸರಿ. ಪುರುಸಯ್ಯ ನಾಯ್ಕ ಎಂದರೆ ನನ್ನ ತಂದೆ. ನನ್ನ ತಂದೆಯ ಮರಣಾನಂತರ ದಾವಾ ಆಸ್ತಿಗಳು ನನ್ನ ತಾಯಿಗೆ ಮಂಜೂರಿಯಾಗಿರುತ್ತವೆ ಎಂದರೆ ಹೌದು. ನನ್ನ ತಾಯಿ ಮರಣ ಹೊಂದಿ ಅಂದಾಜು ಏಳು ವರ್ಷಗಳು ಆಗಿರಬಹುದು. ನನ್ನ ತಾಯಿ ಮರಣ ಹೊಂದುವ ಕಾಲಕ್ಕೆ ಆಕೆಗೆ ಅಂದಾಜು ಎಪ್ಪತ್ತೈದು ವರ್ಷ ವಯಸ್ಸಾಗಿರಬಹುದು. ನನ್ನ ತಾಯಿಯ ಮರಣ ಪ್ರಮಾಣ ಪತ್ರವನ್ನು ನಾನೇ ಮಾಡಿಸಿರುತ್ತೇನೆ. ಸದ್ರಿ ಮರಣ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿ, ಓದಿದವರ ಬಳಿ ಅರ್ಜಿ ಬರೆಯಿಸಿರುತ್ತೇನೆ.

2. ನನಗೆ ಮೂರು ಜನ ಗಂಡು ಮಕ್ಕಳು. ನನ್ನ ದೊಡ್ಡ ಮಗನಿಗೆ ಈಗ ಅಂದಾಜು 33 ವರ್ಷ ವಯಸ್ಸಾಗಿರಬಹುದು. ನನ್ನ ಎರಡನೇ ಮಗನಿಗೆ 31 ವರ್ಷ ವಯಸ್ಸು, ಹಾಗೆ ಕೊನೆಯ ಮಗನಿಗೆ 29 ವರ್ಷ ವಯಸ್ಸಾಗಿರಬಹುದು. ನನ್ನ ಎಲ್ಲಾ ಮಕ್ಕಳು ವಿದ್ಯಾವಂತರಾಗಿರುತ್ತಾರೆ. ನನ್ನ ಎರಡನೇ ಮಗ ಕೆ.ಇ.ಬಿ. ಯಲ್ಲಿ ಕೆಲಸ ಮಾಡುತ್ತಿದ್ದು, ಉಳಿದ ಇಬ್ಬರು ಮಕ್ಕಳಿಗೆ ಕೆಲಸ ಇರುವುದಿಲ್ಲ. ನನ್ನ ತಾಯಿಯ ಮರಣಾನಂತರ ದಾವಾ ಆಸ್ತಿಗಳು ನನ್ನ ಮತ್ತು ನನ್ನ ಸಹೋದರಿಯರ ಹೆಸರಿನಲ್ಲಿ ವಾರಿಸಾ ಆಗಿರುತ್ತದೆ. ನನ್ನ ಮತ್ತು ನನ್ನ ಸಹೋದರಿಯರ ನಡುವೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ಪಾಲು ಆಗಿರುತ್ತದೆ. ನನ್ನ ತಾಯಿ ಬದುಕಿರುವಾಗಲೇ ವಕೀಲರ ಮೂಲಕ ಪಾಲು ಮಾಡಿರುತ್ತಾರೆ. ಆಗ ನಾನು, ನನ್ನ ತಾಯಿ ಮತ್ತು 2ನೇ ಪ್ರತಿವಾದಿ ಹೋಗಿದ್ದರು. ಆ ರೀತಿ ನನ್ನ ತಾಯಿ ದಾವಾ ಆಸ್ತಿಯಲ್ಲಿರುವ ಅವರ ಹಕ್ಕನ್ನು ಮತ್ತು ನನ್ನ ಅಕ್ಕ 2ನೇ ಪ್ರತಿವಾದಿ ದಾವಾ ಆಸ್ತಿಯಲ್ಲಿರುವ ಅವರ ಹಕ್ಕನ್ನು ನನಗೆ ಬರೆದುಕೊಡಲು ಹೋಗಿರುತ್ತೇವೆ. ನನ್ನ ತಾಯಿಯ ಮರಣಾನಂತರ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ನನ್ನ ಮತ್ತು ಮೂರು ಜನ ಸಹೋದರಿಯರ ಹೆಸರಿಗೆ ವಾರಿಸಾ ಆಗಿರುವುದಿಲ್ಲ. ಈ ಮೇಲೆ ಹೇಳಿದಂತೆ ನನ್ನ ತಾಯಿ ದಾವಾ ಆಸ್ತಿಯಲ್ಲಿರುವ ಅವರ ಹಕ್ಕನ್ನು ಮತ್ತು ನನ್ನ ಅಕ್ಕ 2ನೇ ಪ್ರತಿವಾದಿ ದಾವಾ ಆಸ್ತಿಯಲ್ಲಿರುವ ಅವರ ಹಕ್ಕನ್ನು ಬರೆದುಕೊಟ್ಟು ಎಷ್ಟು ವರ್ಷ ಆಯಿತು ಎಂದು ನನಗೆ ಗೊತ್ತಿಲ್ಲ, ನನ್ನ ತಾಯಿ ಮರಣ ಹೊಂದು ಪೂರ್ವದಲ್ಲಿ ಬರೆದುಕೊಟ್ಟಿದ್ದರು.

3. ನನ್ನ ತಂದೆ ನಾನು ಸಣ್ಣ ಇರುವಾಗಲೇ ಮರಣ ಹೊಂದಿರುತ್ತಾರೆ. ನನ್ನ ತಾಯಿ ಬದುಕಿರುವ ತನಕ 2ನೇ ಪ್ರತಿವಾದಿ ನನ್ನ ತಂದೆ ವಾಸ ಮಾಡುತ್ತಿದ್ದ ಮನೆಯಲ್ಲಿ ವಾಸ ಮಾಡುತ್ತಿದ್ದರು ಎಂದರೆ ಹೌದು. ವಾದಿಯ ಮನೆ ಆ ಮನೆಗಿಂತ 100 ಮೀ. ಅಂತರದಲ್ಲಿ ಇರುತ್ತದೆ ಎಂದರೆ ಹೌದು. ಅದೇ ರೀತಿ ನನ್ನ ಮನೆ ವಾದಿಯ ಮನೆಯ ಪಕ್ಕದಲ್ಲಿ ಇರುತ್ತದೆ ಎಂದರೆ ಹೌದು. ನನ್ನ ಮನೆ ನನ್ನ ಗಂಡನಿಗೆ ಸೇರಿದ ಆಸ್ತಿಯಲ್ಲಿ ಇರುತ್ತದೆ ಎಂದರೆ ಹೌದು. ನನ್ನ ತಾಯಿಯವರಿಗೆ ಓದು ಬರಹ ಇರುವುದಿಲ್ಲ ಎಂದರೆ ಹೌದು. ಹಾಗೆ ಸದ್ರಿಯವರು ಹೆಬ್ಬಟ್ಟಿನ

ಗುರುತು ಮಾತ್ರ ಹಾಕುತ್ತಿದ್ದರು ಎಂದರೆ ಹೌದು. ಅದೇ ರೀತಿ ನಾನು ಮತ್ತು ನನ್ನ ಮೂರು ಜನ ಸಹೋದರಿಯರು ಸಹ ಅವಿದ್ಯಾವಂತರಾಗಿದ್ದು, ಹೆಬ್ಬಟ್ಟಿನ ಗುರುತು ಮಾತ್ರ ಹಾಕುತ್ತೇವೆ ಎಂದರೆ ಸರಿ. ನನ್ನ ತಾಯಿ ದಾವಾ ಆಸ್ತಿಗಳ ಅಭಿವೃದ್ಧಿಗಾಗಿ ಕೃಷಿ ಸಾಲ ಮಾಡಿದ್ದರು ಎಂದರೆ, ಮಾಡಿರಬಹುದು ನೆನಪಿಲ್ಲ ಎಂದು ಉತ್ತರಿಸಿರುತ್ತಾರೆ. ನನ್ನ ಮದುವೆಯ ತನಕ ನನ್ನ ಅಮ್ಮನ ಮನೆಯ ಕುಟುಂಬದ ನಿರ್ವಹಣೆಯನ್ನು ನನ್ನ ತಾಯಿಯೇ ನೋಡಿಕೊಳ್ಳುತ್ತಿದ್ದರು. ನನ್ನ ತಾಯಿ ಮರಣ ಹೊಂದುವವರೆಗೆ ಆಕೆಗೆ ವಿಧವಾ ವೇತನ ಬರುತ್ತಿತ್ತು ಎಂದರೆ ಹೌದು. 2ನೇ ಪ್ರತಿವಾದಿಯವರಿಗೆ ಅಂಗವಿಕಲ ವೇತನ ಬರುತ್ತದೆ ಎಂದರೆ ಹೌದು. ನನ್ನ ತಾಯಿಗೆ ವಿಧವಾ ವೇತನವನ್ನು ಊರಿನ ಮುಖಂಡರು ಮಾಡಿಸಿಕೊಟ್ಟಿರುತ್ತಾರೆ. ಅದೇ ರೀತಿ 2ನೇ ಪ್ರತಿವಾದಿಯವರಿಗೆ ಅಂಗವಿಕಲ ವೇತನವನ್ನು ಊರಿನ ಮುಖಂಡರು ಮಾಡಿಸಿಕೊಟ್ಟಿರುತ್ತಾರೆ. ಕೃಷಿಗೆ ಸಾಲವನ್ನು ಮತ್ತು  ಷೇರನ್ನು ನನ್ನ ತಾಯಿಯೇ ಬೇರೆಯವರ ಹತ್ತಿರ ಕೇಳಿಕೊಂಡು ಮಾಡುತ್ತಿದ್ದರು. ಹಾಗೆ ನನ್ನ ತಾಯಿ ಪ್ರತಿ ತಿಂಗಳ ವಿಧವಾ ವೇತನವನ್ನು ಅಂಚೆ ಕಛೇರಿಗೆ ಹೋಗಿ ಪಡೆದುಕೊಳ್ಳುತ್ತಿದ್ದಳು. ದಾವಾ ಆಸ್ತಿಯಲ್ಲಿ ಒಟ್ಟೂ ಎಷ್ಟು ಆಸ್ತಿಗಳು ಇವೆ ಎಂದು ಮತ್ತು ಎಷ್ಟು ದಾವಾ ಪರಿಶಿಷ್ಠಗಳು ಇವೆ ಎಂದು ನನಗೆ ಗೊತ್ತಿಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ್, ಭಟ್ಕಳ.**